ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1107
ಸದಸ್ಯರ ಹೆಸರು : ಶ್ರೀ ಕೆ.ವಿ.ನಾರಾಯಣಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ : 21/09/2021
ಉತ್ತರಿಸುವವರು : ಮಾನ್ಯ ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ ಸಾರ್ವಜನಿಕ ವಲಯ ಉದ್ಯಮಗಳ ಸಚಿವರು

ಕ್ರಸ	ಪ್ರಶ್ನೆ	ಉತ್ತರ
ಅ	ಚಿಕ್ಕಬಾಣಾವರ ಪುರಸಭೆ ವ್ಯಾಪ್ತಿಯಲ್ಲಿನ ಸೋಮಶೆಟ್ಟಿಹಳ್ಳಿ ಮತ್ತು ಕೆರೆಗುಡ್ಡದಹಳ್ಳಿ ಗ್ರಾಮಗಳ ನಮೂನೆ-9ರ ರಿಜಿಸ್ಟರ್ ಇಲ್ಲದ ಕಾರಣ ಸಾರ್ವಜನಿಕರಿಗೆ ಖಾತಾ ವಿತರಣೆ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 156 ಎಂಎಲ್ಆರ್ 2020 ದಿನಾಂಕ.31.03.2021ರಂತೆ ಬೆಂಗಳೂರು ಉತ್ತರ ತಾಲ್ಲೂಕಿನ ಚಿಕ್ಕಬಾಣಾವರ ಜೊತೆಗೆ ಸೋಮಶೆಟ್ಟಹಳ್ಳಿ ಗ್ರಾಮ ಪಂಚಾಯಿತಿ ಪ್ರದೇಶವನ್ನೊಳಗೊಂಡಂತೆ ಗ್ರಾಮ ಪಂಚಾಯಿತಿಯಿಂದ ಪುರಸಭೆಯನ್ನಾಗಿ ಮೇಲ್ದರ್ಜೆಗೇರಿಸಲಾಗಿರುತ್ತದೆ. ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಸೋಮಶೆಟ್ಟಿಹಳ್ಳಿ ರವರಿಂದ ದಿನಾಂಕ.28.06.2021ರಂದು ಸೋಮಶೆಟ್ಟಿಹಳ್ಳಿ ಮತ್ತು ಕೆರೆಗುಡ್ಡದಹಳ್ಳಿ ಗ್ರಾಮಗಳ ನಮೂನೆ-9ಕ್ಕೆ ಸಂಬಂಧಿಸಿದಂತೆ 03 ವ್ಯಾಲ್ಯೂಂ ಪುಸ್ತಕಗಳು ಪುರಸಭೆಗೆ ಹಸ್ತಾಂತರವಾಗಿರುತ್ತವೆ. ಸಾರ್ವಜನಿಕರಿಂದ ಖಾತಾ ವಿತರಣೆ ಬಗ್ಗೆ ಸ್ವೀಕೃತವಾಗುವ ಅರ್ಜಿಗಳ ಕುರಿತು ನಿಯಮಾನುಸಾರ ಪರಿಶೀಲಿಸಿ ಅಗತ್ಯ ಕ್ರಮವಹಿಸಲಾಗುತ್ತಿದೆ.
ಆ	ಪುರಸಭೆ ಅಧಿಕಾರ ಹಸ್ತಾಂತರವಾದ ನಂತರ ಇಲ್ಲಿಯವರೆಗೆ ಗ್ರಾಮಠಾಣಾ ವ್ಯಾಪ್ತಿಯಲ್ಲಿ ವಿತರಿಸಿದ ಖಾತೆಗಳ ಸಂಖ್ಯೆಯೆಷ್ಟು; (ಗ್ರಾಮವಾರು ವಿವರ ನೀಡುವುದು)	ಪುರಸಭೆ ಅಧಿಕಾರ ಹಸ್ತಾಂತರವಾದ ನಂತರ ಗ್ರಾಮಠಾಣಾ ವ್ಯಾಪ್ತಿಯಲ್ಲಿನ ಸ್ವತ್ತುಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕರಿಂದ ಖಾತಾ ವಿತರಣೆ ಬಗ್ಗೆ ಈ ತಹಲ್‌ವರೆವಿಗೂ ಯಾವುದೇ ಅರ್ಜಿ ಸ್ವೀಕೃತವಾಗಿರುವುದಿಲ್ಲ. ಅರ್ಜಿಗಳು ಸ್ವೀಕೃತವಾದಲ್ಲಿ ನಿಯಮಾನುಸಾರ ಪರಿಶೀಲಿಸಿ ಅಗತ್ಯ ಕ್ರಮವಹಿಸಲಾಗುವುದು.
ಇ	ನಮೂನೆ-9ರ ರಿಜಿಸ್ಟರ್ ಇಲ್ಲದ ಕಾರಣ ಗ್ರಾಮ ಪಂಚಾಯತಿಯ ಬೇಡಿಕೆವಹಿಸಯಲ್ಲಿನ ವಿವರಗಳ ಆಧಾರದ ಮೇಲೆ ಖಾತಾ ವಿತರಣೆಗೆ ಕ್ರಮ ಕೈಗೊಳ್ಳಲಾಗಿದೆಯೇ; ಇಲ್ಲವಾದಲ್ಲಿ ಗ್ರಾಮಠಾಣಾ ವ್ಯಾಪ್ತಿಯ ಆಸ್ತಿಗಳಿಗೆ ಖಾತಾ ಪತ್ರ ನೀಡಲು ಕೈಗೊಂಡ ಕ್ರಮವೇನು;	ಸೋಮಶೆಟ್ಟಿಹಳ್ಳಿ ಮತ್ತು ಕೆರೆಗುಡ್ಡದಹಳ್ಳಿ ಗ್ರಾಮಗಳಿಗೆ ಸಂಬಂಧಿಸಿದಂತೆ ಈಗಾಗಲೇ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಸೋಮಶೆಟ್ಟಹಳ್ಳಿ ರವರಿಂದ ನಮೂನೆ-9ರ 03 ವ್ಯಾಲ್ಯೂಂ ಪುಸ್ತಕಗಳು ಹಸ್ತಾಂತರವಾಗಿದ್ದು, ಗ್ರಾಮ ಠಾಣಾ ವ್ಯಾಪ್ತಿಯ ಸಾರ್ವಜನಿಕರಿಂದ ಖಾತಾ ವಿತರಣೆ ಬಗ್ಗೆ ಅರ್ಜಿ ಸ್ವೀಕೃತವಾದಲ್ಲಿ ನಿಯಮಾನುಸಾರ ಪರಿಶೀಲಿಸಿ ಅಗತ್ಯ ಕ್ರಮಕೈಗೊಳ್ಳಲಾಗುವುದು.

ಈ	11ಬಿ ಸ್ವತ್ತುಗಳಿಗೆ ಖಾತಾ ಪತ್ರ ನೀಡದೇ ಇದ್ದಲ್ಲಿ ಸಾರ್ವಜನಿಕರನ್ನು ತೆರಿಗೆ ಪಾವತಿಸುವಂತೆ ಕೇಳುವುದು ನ್ಯಾಯಸಮ್ಮತವೇ?	ಚಿಕ್ಕಬಾಣಾವರ ಪುರಸಭೆ ವ್ಯಾಪ್ತಿಯಲ್ಲಿನ ಸೋಮಶೆಟ್ಟಿಹಳ್ಳಿ ಮತ್ತು ಕೆರೆಗುಡ್ಡದಹಳ್ಳಿ 11ಬಿ ರಲ್ಲಿ ನಮೂದಾಗಿರುವ ಸ್ವತ್ತುಗಳು ಅನಧಿಕೃತ ಸ್ವತ್ತುಗಳಾಗಿರುತ್ತವೆ. ಸ್ಥಳೀಯ ಸಂಸ್ಥೆ ವ್ಯಾಪ್ತಿಯೊಳಗಿನ ಅನಧಿಕೃತ ಸ್ವತ್ತುಗಳು ಸಹ ಸ್ಥಳೀಯ ಸಂಸ್ಥೆಗಳು ಒದಗಿಸುವ ರಸ್ತೆ, ಬೀದಿ ದೀಪ, ಒಳಚರಂಡಿ ವ್ಯವಸ್ಥೆ, ನೀರು ಸರಬರಾಜು ಮುಂತಾದವುಗಳನ್ನು ಬಳಸಿಕೊಳ್ಳುವುದರಿಂದ ಇದಕ್ಕೆ ಆಸ್ತಿ ತೆರಿಗೆ ಪಾವತಿಸಿಕೊಳ್ಳಲಾಗುತ್ತದೆ.

ಸಂಖ್ಯೆ: ನಅಇ 200 ಜಿಇಎಲ್ 2021(ಇ)

ಎನ್. ನಾಗರಾಜು (ಎಂ.ಟಿ.ಬಿ)
ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ
ಸಾರ್ವಜನಿಕ ವಲಯ ಉದ್ಯಮಗಳ ಸಚಿವರು